ಅ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿಗೆ ಬಂದ ಹಣ

491(555) - ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002ನೇ ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು?

ಆ) ಈ ಹಣವನ್ನು ಪೂರ್ತಿ ವಿನಿಯೋಗಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಈಗ ವಿನಿಯೋಗಿಸಿರುವ ಹಣವೆಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ 2001-2002ನೇ ಸಾಲಿಗೆ ರೂ. 537.99 ಕೋಟಿ ಅನುದಾನ ಸ್ವೀಕೃತವಾಗಿದೆ.

ಆ) ಇಲ್ಲ.

ಇ) 2001-2002 ನೇ ಸಾಲಿನಲ್ಲಿ ವಿನಿಯೋಗಿಸಿದ ಹಣ ರೂ. 484.89 ಕೋಟಿ (ಕೇಂದ್ರದ ಪಾಲು)

ರಾಜ್ಯದಲ್ಲಿ ಮೂತ್ರಪಿಂಡ ಮಾರಾಟ

492(556) -ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೂತ್ರಪಿಂಡ ದಾನಿಗಳಿಗೆ ಅನುಮತಿ ನೀಡಲು ಸಮಿತಿಯನ್ನು ರಚಿಸಲಾಗಿದೆಯೇ?

ಆ) 2001-2002 ನೇ ಸಾಲಿನಲ್ಲಿ ಹಾಗೂ 2002-2003ನೇ ಸಾಲಿನಲ್ಲಿ ಇಲ್ಲಿಯವರೆಗೆ ಈ ಸಮಿತಿ ಎಷ್ಟು ಪ್ರಕರಣಗಳನ್ನು ದಾಖಲು ಮಾಡಿದೆ;

ಇ) ಎಷ್ಟು ಮಂದಿಗೆ ಮೂತ್ರಪಿಂಡ ದಾನಕ್ಕೆ ಅನುಮತಿ ನೀಡಿದೆ;

ಈ) ಸರ್ಕಾರದ ಸಮಿತಿಯ ಅನುಮತಿ ಪಡೆಯದೆ ಮೂತ್ರಪಿಂಡ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ದಾನಿಗಳ ಸುಳ್ಳು ವಿಳಾಸ ನೀಡಿ ಅನುಮತಿ ಪಡೆದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಮೂತ್ರಪಿಂಡ ಮಾರಾಟದಲ್ಲಿ ಆಗುತ್ತಿರುವ ಅಕ್ರಮಗಳನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?